



(6ನೇ ಪುಟದಿಂದ)

ಈ ಕಾಡು ಗಿಡಗಳಿಗೆ ಆಯಾ ಪ್ರದೇಶದಲ್ಲಿ ಬೇರೆ ಬೇರೆಯದೆ ಹೆಸರು. ಇಲ್ಲಿ ಕೆಂದಗೆ, ಕರ್ಕೆ, ಕೆಸ, ಕವಲಕ್ಕಿ, ಚಂದರಗಿ ಮಟ್ಟಿಯಿಂದ ಉದ್ಭೂತವಾದ ಮಾಯಾಂಗನೆಯರು.

ಎಲ್ಲ ಕಾಲದಲ್ಲೂ ನೋಡಲು ಸಿಗದ ಅಲ್ಪಾಯುಷಿಗಳು ಇವು. ಮಳೆ ಮುಗಿದು ಚಳಿಗಾಲ ಪ್ರಾರಂಭವಾಗುತ್ತಲೇ ಅವೆಲ್ಲಾ ಚೆಲುವಿಕೆಗಳು ನಶಿಸಿ ಹೋಗಿಬಿಡುತ್ತವೆ. ಮತ್ತೆ ಮಳೆಗಾಲ ಶುರುವಾಗುತ್ತಲೇ ಕಾಡು ಗಿಡಗಂಟಿಗಳಿಗೆ ಹೊಸ ಜೀವ ಸಂಚಲನಗೊಳ್ಳುತ್ತದೆ. ಆಗ ಪ್ರಕೃತಿಯ ನಡುವೆ ನೀಹಾರಿಕೆಯಾಗಿ ನಗುತ್ತ ನಿಲ್ಲುವ ಇಂಥ ಮಾಯಾ ಹೂಗಳ ಸೃಷ್ಟಿ ಅತ್ಯದ್ಭುತವೇ. ಯಾವ ಸುಂದರ ಹೂಗಳ ಗಾರ್ಡನ್‌ಗಳಲ್ಲಿಯೂ ನೋಡಲು ಸಿಗದ, ಪ್ರಕೃತಿ ತನ್ನೊಡಲಲ್ಲಿಯೇ ಇರಿಸಿಕೊಂಡು ಪ್ರದರ್ಶಿಸುವ ಅಪರೂಪದ ಕಾವ್ಯ ಕಮ್ಮಟವೆಂದರೂ ಸರಿಯೆ.

